ನಿವೃತ್ತ ಶಿಕ್ಷಕ ಚಂದ್ರಶೇಖರ ರಾಠೋಡರವರಿಗೆ ಸನ್ಮಾನ

ಯರಗಟ್ಟಿ: ಶಿಕ್ಷಕರು ದೇಶ ಕಟ್ಟುವ, ಸೃಜನಶೀಲ ಸಮಾಜವನ್ನು ನರ್ಮಿಸುವ, ಮಾನವೀಯ ಮೌಲ್ಯಗಳಿಗೆ ಮನ್ನಣೆ ನೀಡುವ ಶಿಳ್ಯರನ್ನು ರಾಳ್ಟಕ್ಕೆ ಅರ್ಪಿಸುವ ಕೆಲಸ ಸದಾ ಮಾಡುತ್ತಿರಬೇಕು. ಕತ್ತಲಿನಂದ ಬೆಳಕಿನೆಡೆಗೆ, ಅಜ್ಞಾನದಿಂದ ಜ್ಞಾನದೆಡೆಗೆ ದಾರಿ ತೋರಿಸುವವನೇ ನೈಜ ಗುರು ಎಂದು ಜಯಶ್ರೀ ಅಕ್ಕನವರು ಹೇಳಿದರು.

ಅವರು ಬ್ರಹ್ಮ ಕುಮಾರಿ ಈಶ್ವರಿ ವಿಶ್ವ ವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ನಿವೃತ್ತ ಶಿಕ್ಷಕ ಚಂದ್ರಶೇಖರ ರಾಠೋಡ ಇವರ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ವಿಜಯಲಕ್ಷ್ಮೀ ಲಿಂಗದಳಿ ಮಾತನಾಡುತ್ತಾ ಶಿಕ್ಷಕರು ತಮ್ಮ ತ್ಯಾಗ ಮತ್ತು ಸಮರ್ಪಣಾ ಮನೋಭಾವದಿಂದಲೇ ತಮ್ಮ ಶಿಳ್ಯರ ಮನಃ ಪಟಲದಲ್ಲಿ ಸದಾ ನಲ್ಲುತ್ತಾರೆ, ಜಗತ್ತಿನ ಶ್ರೇಳ್ಠ ವ್ಯಕ್ತಿಗಳ ನರ್ಮಾಣ ಉತ್ತಮ ಶಿಕ್ಷಕರಿಂದಲೇ ಸಾಧ್ಯವಾಯಿತು ಎಂದು ಅವರು ತನ್ನ ಅನಿಸಿಕೆ ವ್ಯಕ್ತ ಪಡಿಸಿದರು.

ಈ ಸಂದರ್ಭದಲ್ಲಿ ಭಾಗೀರಥಿ ಪಟ್ಟೇದ, ಹೇಮಾ ತಲ್ಲೂರು, ರಾಮಚಂದ್ರ ಗುದಗಪ್ಪನವರ, ಮಹೇಶ ಕೋಟಗಿ, ಸಿದ್ದಣ್ಣಾ ಚಿಲಖಂಡಿ, ಮಾರುತಿ ಪಂಚಕರ, ಚಂದ್ರು ತೋರಣಗಟ್ಟಿ, ಸಿ. ಡಿ. ಹಾದಿಮನ, ಶಿವಣ್ಣಾ ಮಾಡಿವಾಳರ, ಪಾಂಡು ತೋರಣಗಟ್ಟಿ ಸೇರಿದಂತೆ ಸತ್ತಿಗೇರಿ, ಯರಗಟ್ಟಿ, ರೈನಾಪೂರ, ಯರಗಣವಿ ಗ್ರಾಮದ ಶಿಬಿರಾರ್ಥಿಗಳು ಇದ್ದರು.

ಬೆಳಗಾವಿ ದಕ್ಷಿಣ ಮತ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಭಾರಿ ಮುನ್ನಡೆ

ಬೆಳಗಾವಿ : ಕಾಂಗ್ರೆಸ್ ಪಕ್ಷದಿಂದ ಮಾತ್ರ ದೀನ ದಲಿತರ ಏಳಿಗೆ ಸಾಧ್ಯ.. ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕು ಎಂದು ಮಹಿಳಾ ಮತ್ತು ಮಹಿಳಾ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ವಿನಂತಿಸಿದರು.

ಬೆಳಗಾವಿ ದಕ್ಷಿಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಡಗಾವಿ, ಹುಂಚನಹಟ್ಟಿ, ಪೀರಣವಾಡಿ, ಸಮರ್ಥ್ ನಗರದಲ್ಲಿ ಮತಯಾಚಿಸಿದ ಸಚಿವರು, ಕಾಂಗ್ರೆಸ್ ನಂದ ಯೋಗ್ಯ ಅಭ್ಯರ್ಥಿ ಸ್ಪರ್ಧಿಸಿದ್ದು, ಈ ಬಾರಿ ಕಾಂಗ್ರೆಸ್ ಜಯಿಸಲು ಉತ್ತಮ ವಾತಾವರಣವಿದೆ ಎಂದು ಹೇಳಿದರು.

ಹೊರಗಿನ ಅಭ್ಯರ್ಥಿಯನ್ನು ತಿರಸ್ಕರಿಸಿ*

ಸಾಧನೆಯೂ ಇಲ್ಲದ, ಬೆಳಗಾವಿಗೆ ಸಂಬಂಧವೂ ಇಲ್ಲದ, ಬೆಳಗಾವಿಗೆ ನರಂತರ ಅನ್ಯಾಯ ಮಾಡಿರುವ ಜಗದೀಶ್ ಶೆಟ್ಟರ್ ಅವರನ್ನು ತಿರಸ್ಕರಿಸಿ, ಸ್ಥಳೀಯ ಮನೆ ಮಗ ಮೃಣಾಲ್ ಹೆಬ್ಬಾಳ್ಕರ್ ಅವರನ್ನು ಬೆಂಬಲಿಸಿ ಎಂದು ಸಚಿವರು ಮನವಿ ಮಾಡಿದರು. ಹುಬ್ಬಳ್ಳಿಯಲ್ಲಿ ಆರು ಬಾರಿ ಶಾಸಕರಾಗಿ, ಎರಡು ಬಾರಿ ವಿರೋಧ ಪಕ್ಷದ ನಾಯಕರಾಗಿ, ಮುಖ್ಯಮಂತ್ರಿ ಆಗಿದ್ದರೂ ಬಿಜೆಪಿಗೆ ದ್ರೋಹ ಎಸಗಿ ಕಳೆದ ವರ್ಷ ಕಾಂಗ್ರೆಸ್ ಗೆ ಬಂದರು. ಬಿಜೆಪಿ ನಾಯಕರನ್ನು ಬೈಯುತ್ತಲೇ ಏಕಾಏಕಿ ಕಾಂಗ್ರೆಸ್ ಬಿಟ್ಟು, ಬಿಜೆಪಿಗೆ ಹೋದರು. ಇಂತ ಸಮಯಸಾಧಕ ರಾಜಕಾರಣಿ ನಮ್ಮ ಜಿಲ್ಲೆಗೆ ಬೇಕಾ ಎಂದು ಪ್ರಶ್ನಿಸಿದರು. ದೀನ ದಲಿತರ ಏಳಿಗೆಗಾಗಿ ಕಾಂಗ್ರೆಸ್ ಪಕ್ಷ ಹಲವು ಯೋಜನೆಗಳನ್ನ ತಂದಿದೆ. ಪಂಚ ಗ್ಯಾರಂಟಿ ಯೋಜನೆಗಳ ಮೂಲಕ ಪ್ರತಿ ಮನೆಗೆ ಸರಾಸರಿ 4 ರಿಂದ 5 ಸಾವಿರ ರೂಪಾಯಿ ತಲುಪುತ್ತಿದೆ. ಬಿಜೆಪಿ ಶ್ರೀಮಂತರ ಸಾಲ ಮನ್ನಾ ಮಾಡುವ ಮೂಲಕ ಶ್ರೀಮಂತರಿಗಷ್ಟೇ ಸೀಮಿತವಾಗಿದೆ ಎಂದು ಆರೋಪಿಸಿದರು. ಮೃಣಾಲ್ ಹೆಬ್ಬಾಳ್ಕರ್ ಗೆದ್ದರೆ ಕ್ಷೇತ್ರದ ಮನೆ ಮಗನಾಗಿ ಕೆಲಸ ಮಾಡಲಿದ್ದಾನೆ ಎಂದು ಹೇಳಿದರು. ನಮ್ಮ ಮಗನಗೆ ಮತ ನೀಡಿ, ಕ್ಷೇತ್ರದ ಅಭಿವೃದ್ಧಿಗೆ ಕೈಜೋಡಿಸಿ ಎಂದು ಕರೆ ನೀಡಿದರು.

ಸಚಿವರು ಹೋದಲೆಲ್ಲಾ ಸ್ಥಳೀಯ ಕಾರ್ಯಕರ್ತರು ಪಟಾಕಿ ಸಿಡಿಸಿ ಅದ್ದೂರಿ ಸ್ವಾಗತ ನೀಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪರಶುರಾಮ ಢಗೆ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಜೆ.ಪ್ರದೀಪ್ ಮೊದಲಾದವರು ಸಚಿವರಿಗೆ ಸಾಥ್ ನೀಡಿದರು

ಜಗದೀಶ ಶೆಟ್ಟರ ಗೆಲುವು ಖಚಿತ : ನಿರಾಣಿ

ಬೆಳಗಾವಿ : ಬೆಳಗಾವಿ ಲೋಕಸಭಾ ಚುನಾವಣೆ ಬಿಸಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಎರಡೂ ರಾಷ್ಟ್ರೀಯ ಪಕ್ಷಗಳು ಮತದಾರರನ್ನು ಸೆಳೆಯಲು ತಮ್ಮ ರಣತಂತ್ರದ ಮೂಲಕ ವಿಭಿನ್ನ ಪಯತ್ನ ಮಾಡುತ್ತಾ, ಕೊನೆಗೆ ವೈಯಕ್ತಿಕ ಟೀಕೆ ಟಿಪ್ಪಣಿ ಮಾಡುವ ಹೇಳಿಕೆಗಳನ್ನು ನೀಡುತ್ತಾ ಬರುತ್ತಿವೆ.

ಅದೇ ಹಾದಿಯಲ್ಲಿ ಕೆಲ ದಿನಗಳ ಹಿಂದೆ ಬೆಳಗಾವಿಯ ಬಿಜೆಪಿಯ ಕಚೇರಿಯಲ್ಲಿ ಮಾಜಿ ಸಚಿವ ಮುರುಗೇಶ ನಿರಾಣಿ ಅವರು ಸಿದ್ದಿಗಾರರೊಂದಿಗೆ ಮಾತನಾಡುತ್ತಾ, ಈ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಜಗದೀಶ್ ಶೆಟ್ಟರ್ ಅವರು ನೂರಕ್ಕೆ ನೂರರಷ್ಟು ಗೆದ್ದು, ಸಚಿವರಾಗಿ ಆಯ್ಕೆ ಆಗುತ್ತಾರೆ, ಈಗ ಶೆಟ್ಟರ್ ಅಡ್ರೆಸ್ ಕೇಳುವ ಇದೆ ಲಕ್ಷ್ಮಿ ಹೆಬ್ಬಾಳಕರ ಅವರು ಎಲ್ಲರಿಗಿಂತ ಮೊದಲ ಶೆಟ್ಟರ್ ಕಚೇರಿಯಲ್ಲಿ ಇರುತ್ತಾರೆ ಎಂದು ಭವಿಷ್ಯ ನುಡಿದಿದ್ದಾರೆ.

ಈ ಮೊದಲು ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇದ್ದಾಗ, ಯಡಿಯೂರಪ್ಪ, ಬೊಮ್ಮಾಯಿ, ಶೆಟ್ಟರ್ ಮುಖ್ಯಮಂತ್ರಿಗಳಾಗಿದ್ದಾಗ, ಇದೇ ಲಕ್ಷ್ಮಿ ಹೆಬ್ಬಾಳಕರ ಅವರು ಬಿಜೆಪಿ ಮಂತ್ರಿಗಳ ಕಚೇರಿಗೆ ಬಂದು, ಯಾವ ಬಿಜೆಪಿ ಶಾಸಕ, ಸಚಿವರೂ ಪಡೆಯಲಾರದಷ್ಟು ಅನುದಾನ ಪಡೆದುಕೊಂಡಿದ್ದಾರೆ, ಆಗ ಇವರಿಗೆ ಬಿಜೆಪಿಯವರ ಅಡ್ರೆಸ್ ಗೊತ್ತಿರಲಿಲ್ಲವಾ ಶೆಟ್ಟರ್ ಅಡ್ರೆಸ್ ಈಗ ಕೇಳುವವರು ಆಗ ಅನುದಾನ ಪಡೆಯುವಾಗ ಏಕೆ ಕೇಳಲಿಲ್ಲ ಎಂದು ಪ್ರಶ್ನೆ ಮಾಡಿದ್ದಾರೆ.

ಬೆಳಗಾವಿಯ ಜನ ಬಹಳ ಪ್ರಜ್ಞಾವಂತರಿದ್ದಾರೆ, ಯಾರನ್ನು ಆರಿಸಬೇಕೆಂದು ಅವರಿಗೆ ಗೊತ್ತಿದೆ, ಶೆಟ್ಟರ್ ಅವರು ನೂರಕ್ಕೆ ನೂರರಷ್ಟು ಕೇಂದ್ರದ ಮಂತ್ರಿ ಆಗುತ್ತಾರೆ, ಆಗ ಇದೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಅವರ ಕಚೇರಿಗೆ ಹೋಗುತ್ತಾರೆ ಎಂದು ವ್ಯಂಗ್ಯವಾಡಿದ್ದಾರೆ.

ಇಂದು ಉಪನ್ಯಾಸ ಕಾರ್ಯಕ್ರಮ

ಹುಬ್ಬಳ್ಳಿ: ಬಸವ ಕೇಂದ್ರದವರುರವಿವಾರ 14–4–2024 ರಂದು ಮುಂಜಾನೆ 10 ಗಂಟೆಗೆ ಗೋಕುಲ ರಸ್ತೆ, ಮುರಾರ್ಜಿನಗರ 2ನೇ ಹಂತ, ಬಸವ ಕೇಂದ್ರದ ವಿ.ಎಂ.ಕೊಟಗಿ ಬಸವ ಸಂಸ್ಕೃತಿ ಶಾಲೆಯಲ್ಲಿ 12ನೇ ಶತಮಾನದಅನುಭವ ಮಂಟಪದಅಧ್ಯಕ್ಷ, ಶ್ರೇಷ್ಟ ವಚನಕಾರ ಅಲ್ಲಮಪ್ರಭುಜಯಂತಿ ಹಾಗೂ ಸಂವಿಧಾನ ಶಿಲ್ಪಿ ಡಾ. ಭೀಮರಾವ್ ಅಂಬೇಡ್ಕರಜಯಂತಿ ಅಂಗವಾಗಿ ಉಪನ್ಯಾಸಕಾರ್ಯಕ್ರಮವನ್ನು ಆಯೋಜಿಸಿದ್ದಾರೆ.

ಶ್ರೀ ಗುರು ಬಸವಮಂಟಪದ ಶಶಿಧರ ಕರವೀರಶೆಟ್ಟರಅವರುಅಲ್ಲಮಪ್ರಭುಅವರಜೀವನ ಹಾಗೂ ಸಾಧನೆಕುರಿತು ಹಾಗೂ ನವೃತ್ ವೈದ್ಯಾಧಿಕಾರಿಡಾ. ವಿ.ಬಿ.ನಟಾಲಿ ಅವರುಡಾ. ಬಿ.ಆರ್.ಅಂಬೇಡ್ಕರಅವರಜೀವನ ಹಾಗೂ ಸಾಧನೆಕುರಿತುಅನುಭಾವ ನೀಡಲಿದ್ದಾರೆ. ಬಸವಕೇಂದ್ರದಅಧ್ಯಕ್ಷ ಪ್ರೊ ಜೆ.ಬಿ.ಹಳ್ಯಾಳ ಅಧ್ಯಕ್ಷತೆ ವಹಿಸುವರು. ಬಸವಾಭಿಮಾನಗಳು ಹೆಚ್ಚಿನ ಸಂಖ್ಯೆಯಲ್ಲಿಅಲ್ಲಮಪ್ರಭುಜಯಂತಿ ಹಾಗೂ ಡಾ. ಭೀಮರಾವ್ ಅಂಬೇಡ್ಕರ ಜಯಂತಿಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಎಂದುಬಸವ ಪರಿಸರ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿ, ಗ್ರಂಥಪಾಲಕಡಾ. ಸುರೇಶ ಡಿ. ಹೊರಕೇರಿಅವರು ವಿನಂತಿಸಿದ್ದಾರೆ. ಕೋಳಿವಾಡ ಮಾರ್ಬಲ್ಸ್&ಗ್ರಾನೈಟ್ಸ ಮಾಲಿಕರಾದ ಶಂಕರ ಕೋಳಿವಾಡ, ಹಾಗೂ ದಾಕ್ಷಾಯಿಣಿ ಕೋಳಿವಾಡ ಅವರಭಕ್ತಿದಾಸೋಹ ಸೇವೆ ಮಾಡಲಿದ್ದಾರೆ.

ದಿ.ಎಸ್.ಡಿ.ಇಂಚಲ ಅವರ ಅವರ ಸಾಧನೆ ಕುರಿತು ಉಪನ್ಯಾಸ ಕಾರ್ಯಕ್ರಮ

ಬೆಳಗಾವಿ–13– ಕನ್ನಡ ಸಾಹಿತ್ಯ ಪರಿಷತ್ತು ಬೆಳಗಾವಿ ಜಿಲ್ಲೆ ಮತ್ತು ಕನ್ನಡ ಸಾಂಸ್ಕೃತಿಕ ಭವನದ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದೊಂದಿಗೆ, ಬೆಳಗಾವಿ ಜಿಲ್ಲೆಯ ಶತಮಾನ ಕಂಡ ಸಾಹಿತಿಗಳಾದ, ದಿ.ಎಸ್. ಡಿ.ಇಂಚಲ ಅವರ ಕುರಿತು ತಿಂಗಳ ಉಪನ್ಯಾಸ ಕಾರ್ಯಕ್ರಮವನ್ನು ಮಂಗಳವಾರ: ದಿ:16/04/2024 ರಂದು, ಸಮಯ ಸಂಜೆ:04:00 ಕ್ಕೆ, ಸ್ಥಳ: "ಕನ್ನಡ ಭವನ" ನೆಹರು ನಗರ, ರಾಮದೇವ ಹೊಟೇಲ್ ಹಿಂದೆ ಬೆಳಗಾವಿಯಲ್ಲಿ ನಡೆಯಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಸಾಪ ಬೆಳಗಾವಿ ಜಿಲಾಧ್ಯಕ್ಷರಾದ ಶ್ರೀಮತಿ ಮಂಗಲಾ ಶ್ರೀ ಮೆಟಗುಡ್ಡ ಅವರು ವಹಿಸಲಿದ್ದಾರೆ. ಬೆಳಗಾ ವಿಯ ಖ್ಯಾತ ಸಾಹಿತಿಗಳು ಡಾ.ಗುರುದೇವಿ ಹುಲೆಪ್ಪನವರಮಠ ಅವರು ದಿ.ಎಸ್.ಡಿ.ಇಂಚಲ ಅವರ ಕುರಿತು ಉಪನ್ಯಾಸವನ್ನು ನೀಡಲಿದ್ದಾರೆ. ಶ್ರೀ.ಜಗಜ್ಯೋತಿ ಬಸವೇಶ್ವರ ಕಲ್ಯಾಣ ಮಂದಿರ ಟ್ರಸ್ಟ್ ಅಧ್ಯಕ್ಷರು, ಶ್ರೀ.ಚಂದ್ರಶೇಖರ ಎಸ್ ಬೆಂಬಳಗಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಶ್ರೀ.ಪ್ರಕಾಶ ಬ ಅವಲಕ್ಕಿ ಅಧ್ಯಕ್ಷರು, ಕಸಾಪ ತಾ.ಘ.ಹುಕ್ಕೇರಿ ಅತಿಥಿಗಳಾಗಿ ಆ ಗಮಿಸಲಿದ್ದಾರೆ.

ಶ್ರೀ ಎಮ್ ವೈ ಮೆಣಸಿನಕಾಯಿ ಅವರು ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ. ಶ್ರೀ.ಶಿವಾನಂದ ತಲ್ಲೂರ ಅತಿಥಿ ಉಪನ್ಯಾಸಕರ ಪರಿಚಯ ಮಾಡಲಿದ್ದಾರೆ. ಶ್ರೀಮತಿ.ಶೈಲಜಾ ಭಿಂಗೆ, ಶ್ರೀಮತಿ. ಜಯಶೀಲಾ ಬ್ಯಾಕೋಡ, ಶ್ರೀಮತಿ.ಸರ್ವಮಂಗಲಾ ಅರಳಿ ಮಟ್ಟಿ ಗೌರವ ಸನ್ಮಾನ ಮಾಡಲಾಗುವುದು. ಶ್ರೀ ವೀರಭದ್ರಪ್ಪಾ ಮ ಅಂಗಡಿ ಸ್ವಾಗತವನ್ನು ಮಾಡಲಿದ್ದಾರೆ. ಶ್ರೀ ಸುನೀಲ ಹಲವಾಯಿ ಅವರು ಶ್ರೀಮತಿ ಪ್ರತಿಭಾ ಕಳ್ಳಿಮಠ ಅವರು ಅತಿಥಿಗಳ ಪರಿಚಯ ವನ್ನು ಮಾಡಲಿದ್ದಾರೆ. ಕೆ.ಎಲ್.ಇ.ಸಂಗೀತ ಮಹಾವಿದ್ಯಾಲಯದ ವಿದ್ಯಾರ್ಥಿನಿಯರು ನಾಡಗೀತೆಯನ್ನು ಪ್ರಸ್ತುತ ಪಡಿಸಲಿದ್ದಾರೆ. ಡಾ.ಭಾರತಿ ಮಠದ ಕಾರ್ಯಕ್ರಮವನ್ನು ನರೂಪಣೆ ಮಾಡಲಿದ್ದಾರೆ. ಶ್ರೀ ಆಕಾಶ ಥಬಾಜ್ ಅವರು ವಂದ ನಾರ್ಪಣೆ ಮಾಡಲಿದ್ದಾರೆ. ಕ.ಸಾ.ಪ. ಬೆಳಗಾವಿ ಜಿಲ್ಲೆಯ ಎಲ್ಲ ತಾಲೂಕಾ ಅಧ್ಯಕ್ಷ ರು ಗಳು, ಹಾಗೂ ಜಿಲ್ಲಾ ಕ.ಸಾ.ಪ. ಕಾರ್ಯ ಕಾರಿ ಸಮಿ ತಿಯ ಸರ್ವ ಸದಸ್ಯರು, ಕ.ಸಾ.ಪ. ಸರ್ವ ಸದಸ್ಯರು, ಹಾಗೂ ಸಾಹಿತಿಗಳು, ಕಲಾವಿದರು ಮತ್ತು ಕನ್ನಡಪರ ಸಂಘಟನೆಗಳು, ಸಮಸ್ತ ಕನ್ನಡ ಮನಸ್ಸುಗಳು ಮತ್ತು ಕನ್ನಡ ಸಾಂಸ್ಕೃತಿಕ ಭವನದ ಕ್ಷೇಮಾಭಿವೃದ್ಧಿ ಸಂಘದ ಸರ್ವ ಸದಸ್ಯರು ಎಲ್ಲರೂ ಈ ಕಾರ್ಯಕ್ರಮಕ್ಕೆ ಆಗಮಿಸಿ ಶೋಭೆತರಬೇಕೆಂದು, ಕಸಾಪ ಬೆಳಗಾವಿ ಜಿಲ್ಲಾಧ್ಯಕ್ಷರಾದ ಶ್ರೀಮತಿ ಮಂಗಲಾ ಶ್ರೀ ಮೆಟಗುಡ್ಡ ವಿನಂತಿಸಿಕೊಂಡಿದ್ದಾರೆ.

ನೇಸರಗಿ ಪಿ ಯು ಕಾಲೇಜು ಉತ್ತಮ ಫಲಿತಾಂಶ

ನೇಸರಗಿ. ಇಲ್ಲಿನ ಸರ್ಕಾರಿ ಪಿ ಯು ಕಾಲೇಜಿನ 2024 ನೇ ಸಾಲಿನ ದ್ವಿತೀಯ ಪಿ ಯು ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಅಪಾರ ಸಾಧನೆ ಮಾಡಿದ್ದಾರೆ. ಕಲಾ ವಿಭಾಗದಲ್ಲಿ ಪರೀಕ್ಷೆಗೆ ಪಾಲ್ಗೊಂಡ 69 ಜನರಲ್ಲಿ 63 ವಿದ್ಯಾರ್ಥಿಗಳು ತೇರ್ಗಡೆ ಅಗಿದ್ದು 91% ಫಲಿತಾಂಶ ಬಂದಿದೆ . ವಾಣಿಜ್ಯ ವಿಭಾಗದಲ್ಲಿ 50 ವಿದ್ಯಾರ್ಥಿಗಳಲಿ 49 ಜನ ಪಾಸಾಗಿ 98% ಸಾಧನೆ ಮಾಡಿದ್ದಾರೆ. ವಿಜ್ಞಾನ ವಿಭಾಗದಲ್ಲಿ 31 ಜನರಲ್ಲಿ 31 ಜನ ಪಾಸಾಗಿ 100% ಫಲಿತಾಂಶ ಬಂದಿದೆ. ಕಲಾ ವಿಭಾಗದಲ್ಲಿ ಶೃಷ್ಟಿ ಪೂಜೇರಿ (586)ಪ್ರಥಮ್ ಸ್ಥಾನ ಪಡೆದರೆ, ವೀರನಗೌಡ ಪಾಟೀಲ (577) ದ್ವಿತೀಯ ಸ್ಥಾನ ಪಡೆದರೆ, ಕವಿತಾ ಜೂಟ್ಟಪ್ಪನವರ (543) ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಸವಿತಾ ಕೆಂಪಗೇರಿ (566) ಅಂಕ ಪಡೆದು ಪ್ರಥಮ ಸ್ಥಾನ ಪಡೆದರೆ, ಪರಸಪ್ಪ ಹಮ್ಮನವರ (561) ಅಂಕ ಪಡೆದು ದ್ವಿತೀಯ ಸ್ಥಾನ, ಭಾರತಿ ಕವಲದ (560) ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಈರಮ್ಮ ಕಮತಗಿ (535)ಅಂಕ ಪಡೆದು ಪ್ರಥಮ ಸ್ಥಾನ, ದೀಪಾ ಸಿಂದ್ಯಾನಟ್ಟಿ (514) ಅಂಕ ಪಡೆದು ದ್ವಿತೀಯ ಸ್ಥಾನ, ಶೃಷ್ಟಿ ಧೂಲಪ್ಪನವರ (412) ಅಂಕ ಪಡೆದು ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾರೆ ಎಂದು ಪ್ರಾಂಸ್ಪಾಲರಾದ ಎನ ಏಮ್ . ಕುದರಿಮೋತಿ, ಕಾಲೇಜು ಸುಧಾರಣ ಸಮಿತಿ ಅಧ್ಯಕ್ಷರು, ಶಾಸಕರಾದ ಬಾಬಾಸಾಹೇಬ್ ಪಾಟೀಲ, ಉಪಾಧ್ಯಕ್ಷರ ಬಸವರಾಜ್ ಚಿಕ್ಕನಗೌಡ್ರ,ಭೋಧಕ್, ಭೋಧಕೇತರ್ ಸಿಬ್ಬಂದಿ, ಸದಸ್ಯರು ಹರ್ಷ ವ್ಯಕ್ತಪಡಿಸಿದ್ದಾರೆ.

ಮೂಡಲಗಿಯಲ್ಲಿ ಸಿ.ಐ.ಎಸ್.ಎಫ್ ಯೋಧರಿಂದ ಪಥ ಸಂಚಲನ

ಮೂಡಲಗಿ: ಶಾಂತಿ–ಸುವ್ಯವಸ್ಥೆ ಕಾಪಾಡುವ ನಟ್ಟಿನಲ್ಲಿ ಮತ್ತು ಮೇ.7ರಂದು ಜರುಗುವ ಲೋಕಸಭಾ ಚುನಾವಣೆ ಹಿನ್ನೆಲೆ ಅರಭಾವಿ ಮತ ಕ್ಷೆತ್ರದಲ್ಲಿ ಮತದಾರರು ಧೈರ್ಯದಿಂದ ಮತದಾನ ಮಾಡಿ ಸಂವಿಧಾನ ಹಕ್ಕು ಪಡೆಯಬೇಕು ಎಂದು ಕೇಂದ್ರಿಯ ಔದ್ಯೋಗಿಕ ಭದ್ರತಾ ಮೀಸಲು(ಸಿ.ಐ.ಎಸ್.ಎಫ್) ಪಡೆಯ ಯೋಧರು ಹಾಗೂ ಪೊಲೀಸ್ ಇಲಾಖೆಯಿಂದ ಶನವಾರದಂದು ಮೂಡಲಗಿ ಪಟ್ಟಣದಲ್ಲಿ ಪಥ ಸಂಚಲನ ಕೈಗೊಳ್ಳುವ ಮೂಲಕ ಸಾರ್ವಜನಕರಲ್ಲಿ ಮತದಾನ ಜಾಗೃತಿ ಮೂಡಿಸಿದರು. ಮೂಡಲಗಿ ಪಟ್ಟಣದ ವಿದ್ಯಾನಗರ, ಅಂಬೇಡ್ಕರ್ ನಗರ, ಕಲ್ಮೇಶ್ವರ ವೃತ್ತ, ಸಂಗಪ್ಪ ವೃತ್ತ, ಬಸವೇಶ್ವರ ವೃತ್ತ, ಕರೇಮ್ಮ ದೇವಿ ಸರ್ಕಲ್, ಚೆನ್ನಮ್ಮ ಸರ್ಕಲ್ ಮಾರ್ಗವಾಗಿ ಮುಖ್ಯ ರಸ್ತೆಗಳಲ್ಲಿ ಶನವಾರ ಸಶಸ್ತ್ರ ಪಡೆಯ ಸುಮಾರು 100 ಯೋಧರು ಹಾಗೂ ಪೊಲೀಸ್ ಸಿಬ್ಬಂದಿ ವರ್ಗದವರು ಪಥ ಸಂಚಲನ ಮಾಡಿದರು. ಈ ಸಂದರ್ಭದಲ್ಲಿ

ಅರಭಾವಿ ಮತ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ ಪ್ರಭಾವತಿ ಫಕೀರಪೂರ, ಮೂಡಲಗಿ ತಹಶೀಲ್ದಾರ ಬಿ.ಎಸ್.ಕಡಕಬಾವಿ, ಗೋಕಾಕ ಡಿ.ವಾಯ್.ಎಸ್.ಪಿ ದೂದಪೀರ್ ಎಚ್ ಮುಲ್ಲಾ, ಮೂಡಲಗಿ ಸಿ.ಪಿ.ಐ ಅಬ್ದುಲ್‌ವಾಜೀದ್ ಪಟೇಲ್, ಮೂಡಲಗಿ ಪಿಎಸ್‌ಐಗಳಾದ ಚಂದ್ರಶೇಖರ ಹೆರಕಲ್, ಬಿ.ಎಚ್.ಕುಂಬಾರ, ಕುಲಗೋಡ ಠಾಣೆಯ ಪಿಎಸ್‌ಐಗಳಾದ ಆನಂದ ಸಿ, ನರಹಿಂಹರಾಜು ಡಿ ಹಾಗೂ ಯೋಧರ ಪಡೆಯ ಮುಖ್ಯಸ್ಥರಾದ ಈರಾಲಾ ಭಾರತಿಯ, ಎ.ಎನ್.ಯಾದವಾದ ಹಾಗೂ ಯೋಧರು ಮತ್ತು ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಪಥ ಸಂಚಲದಲ್ಲಿ ಭಾಗವಹಿಸಿದ್ದರು. ಮೊದಲಿಗೆ ಪೊಲೀಸ್ ಠಾಣೆಯ ಆವರಣದಲ್ಲಿ ಯೋದರನ್ನು ಪುರಸಭೆ ಸದ್ಯರು ಮತ್ತಿತರು ಹೂ–ಮಾಲೆ ಹಾಕಿ ಸ್ವಾಗತಿಸಿಕೊಂಡರು.

ಡಾ. ಬಿ. ಆರ್. ಅಂಬೇಡ್ಕರ್‌ರವರ 133 ನೇ ಜಯಂತಿ ಕುರಿತು ಉಪನ್ಯಾಸ

ಗದಗ–13 : ಪ್ರತಿವಾರದಂತೆ ದಿನಾಂಕ 14–04–2024 ರವಿವಾರ ಬೆಳಿಗ್ಗೆ 11–00 ಕ್ಕೆ ಶರಣ ಎಸ್. ಎಂ. ಹಾದಿಮನ, ಅಧ್ಯಕ್ಷರು, ಅಂಭಿಗ ಚೌಡಯ್ಯ ಅನುಭಾವ ಪೀಠ, ಶರಣಬಸವೇಶ್ವರ ನಗರ, ಬೆಟಗೇರಿ–ಗದಗ ಇಲ್ಲಿ ನಡೆಯಲಿರುವ ಬಸವದಳದ 1589 ನೇ ಶರಣ ಸಂಗಮದಲ್ಲಿ ಡಾ. ಬಿ. ಆರ್. ಅಂಬೇಡ್ಕರ್‌ರವರ 133